# ನಿಮಗೇನ್ ಬಿಡಿ ಸರ್, ಎಲ್ಲ ಗೊತ್ತಿರುತ್ತಲ್ಲ!

‘ಬಾಂಬ್ ಇದೆ ಎಂಬುದು ಸುಳ್ಳು ಅಂತ ನನಗೂ ಗೊತ್ತಾಯ್ತು ಮೇಡಂ. ಆದರೆ, ಎಲ್ಲರ ಪೇರೆಂಟ್ಸ್ ಬಂದರು, ನಮ್ಮಪ್ಪ ಬರಲಿಲ್ವಲ್ಲ ಎಂದು ಮಗಳು ಬೇಸರ ಮಾಡ್ಕೊಬಾರದು ಎಂಬ ಉದ್ದೇಶದಿಂದ ಬಂದೆ’ ಎಂದೆ ಹುಳ್ಳಗೆ ನಗುತ್ತ.

■ **ಗುರು ಪಿ.ಎಸ್.**

ಬೆಂಗಳೂರಿನಲ್ಲಿನ ಸುಮಾರು 20 ಶಾಲೆಗಳಿಗೆ ಬಾಂಬ್ ಬೆದರಿಕೆ ಕರೆ. ಮಕ್ಕಳನ್ನು ಕರೆತರಲು ಶಾಲೆಯತ್ತ ದೌಡಾಯಿಸಿದ ಪೋಷಕರು–

ಹೀಗೆ, ಟೀವಿ ಚಾನಲ್‌ಗಳಲ್ಲಿ ಬ್ರೇಕಿಂಗ್ ನ್ಯೂಸ್ ಬಿತ್ತರವಾಗುತ್ತಿತ್ತು. ನಾನು ಸುದ್ದಿಯ ಪರಿಶೀಲನೆಗೆ ಇಳಿದೆ. ಅದು, ಹುಸಿಬಾಂಬ್ ಕರೆ ಎಂಬುದು ಖಚಿತವಾಯಿತು. ಅಷ್ಟರಲ್ಲಾಗಲೇ ನನ್ನ ಮಗಳ ಶಾಲೆಯ ವಿದ್ಯಾರ್ಥಿಗಳ ಹಲವು ಪೋಷಕರು ಶಾಲೆಯತ್ತ ಓಡುತ್ತಿದ್ದರು.

‘ಏನ್ ಸರ್, ವೇದಾಳನ್ನ (ನನ್ನ ಮಗಳು) ಕರ್ಕೊಂಡು ಬರಲ್ವಾ’ ಎಂದು ಕೇಳಿದರು ಪಕ್ಕದ ಮನೆಯವರು. ‘ಹೌದಲ್ವಾ, ಸುದ್ದಿ ಸುಳ್ಳೆಂದು ನನ್ನ ಮಗಳಿಗೆ ಹೇಗೆ ಗೊತ್ತಿರಬೇಕು’ ಎಂಬ ಯೋಚನೆ ಬಂದೊಡನೆ ನಾನೂ ಶಾಲೆಯತ್ತ ಹೆಜ್ಜೆ ಹಾಕಿದೆ.

‘ಅಯ್ಯೋ ಸರ್, ನೀವೂ ಬಂದ್ ಬಿಟ್ರಾ?’ ಅಚ್ಚರಿಯಿಂದ ಕೇಳಿದರು ಮಗಳ ಕ್ಲಾಸ್ ಟೀಚರ್. ‘ಯಾಕ್ ಮೇಡಂ ಏನಾಯ್ತು?’ ಅದೇ ಅಚ್ಚರಿ ನನಗೂ.

‘ಅಂಥದ್ದೇನಿಲ್ಲ ಸರ್, ಎಲ್ಲ ಮಕ್ಕಳು ಆತಂಕದಲ್ಲಿದ್ದರು. ಅದಕ್ಕೆ ನಾನು, ನೋಡಿ ವೇದಾಳ ಅಪ್ಪ ಜರ್ನಲಿಸ್ಟ್. ಅವರಿಗೆಲ್ಲವೂ ಮೊದಲೇ ಗೊತ್ತಾಗುತ್ತೆ. ಬಾಂಬ್ ಇಟ್ಟಿರೋದು ನಿಜ ಆಗಿದ್ದರೆ ಎಲ್ಲರಿಗಿಂತ ಮೊದಲು ಅವರು ಬಂದಿರುತ್ತಿದ್ದರು. ಈಗ, ಅವರೇ ಬಂದಿಲ್ಲ ಅಂದರೆ, ಇದೆಲ್ಲ ಸುಳ್ಳು ಸುದ್ದಿ ಅಂತ ಅರ್ಥ. ಆರಾಮಾಗಿ ಪಾಠ ಕೇಳಿ ಎಂದು ಎಲ್ಲ ಸ್ಟೂಡೆಂಟ್ಸ್‌ಗೆ ಧೈರ್ಯ ಹೇಳಿ ಕೂರಿಸಿಕೊಂಡಿದ್ದೆ. ಈಗ ನೀವೂ ಬಂದ್ ಬಿಟ್ರಲ್ಲಾ ಸರ್’ ಎನ್ನುತ್ತಾ, ‘ಇವರು ಯಾಕಾದರೂ ಬಂದ್ರೋ, ನಾನು ಕೊಟ್ಟಿದ್ದ ಬಿಲ್ಡಪ್ ಎಲ್ಲ ವೇಸ್ಟ್ ಆಯ್ತು’ ಎನ್ನುವ ರೀತಿಯಲ್ಲಿ ಮುಖ ತಿರುಗಿಸಿದರು!

‘ಬಾಂಬ್ ಇದೆ ಎಂಬುದು ಸುಳ್ಳು ಅಂತ ನನಗೂ ಗೊತ್ತಾಯ್ತು ಮೇಡಂ. ಆದರೆ, ಎಲ್ಲರ ಪೇರೆಂಟ್ಸ್ ಬಂದರು, ನಮ್ಮಪ್ಪ ಬರಲಿಲ್ವಲ್ಲ ಎಂದು ಮಗಳು ಬೇಸರ ಮಾಡ್ಕೊಬಾರದು ಎಂಬ ಉದ್ದೇಶದಿಂದ ಬಂದೆ’ ಎಂದೆ ಹುಳ್ಳಗೆ ನಗುತ್ತ. ‘ಹೋಗಲಿ ಬಿಡಿ ಸರ್, ಹೇಗೂ ಬಂದಿದೀರಲ್ಲ ಮಗಳನ್ನ ಕರೆದುಕೊಂಡೇ ಹೋಗಿ’ ಎನ್ನುತ್ತಾ, ‘ಒಟ್ಟಿನಲ್ಲಿ ಕ್ಲಾಸ್‌ಗೆ ಕಲ್ಲು ಬಿತ್ತು’ ಎಂಬ ಮುಖಭಾವದಲ್ಲಿ ಕ್ಲಾಸ್‌ರೂಮ್‌ನತ್ತ ಹೊರಟರು ಟೀಚರಮ್ಮ.

***

ಇದು ಮೊದಲ ಸಲವೇನಲ್ಲ. ‘ನೀವೇನ್ ಬಿಡಿ ಸರ್ ಜರ್ನಲಿಸ್ಟ್. ನಿಮಗೆ ಗೊತ್ತಿಲ್ಲದ್ದು ಏನಿದೆ’ ಎಂದು ಅನೇಕರು ಹೇಳುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲೆಲ್ಲ ಎಲ್ಲ ತಿಳಿದವನಂತೆಯೇ ‘ಪೋಸು’ ಕೊಡಬೇಕು, ಏನೇನೂ ಗೊತ್ತಿರದಿದ್ದರೂ!

‘ನೀವೇನ್ ಬಿಡ್ರಪ್ಪ ಪತ್ರಕರ್ತರು, ನಿಮಗೆಲ್ಲ ಎಮ್ಮೆಲ್ಲೆಗಳು, ಮಿನಿಸ್ಟರ್‌ಗಳು ತುಂಬಾ ಕ್ಲೋಸ್ ಆಗಿರ್ತಾರೆ, ಐಎಎಸ್, ಐಪಿಎಸ್ ಆಫೀಸರ್ಸ್‌ಗಳೆಲ್ಲ ಕಾಂಟಾಕ್ಟ್‌ನಲ್ಲಿರ್ತಾರೆ, ನಿಮ್ ಲೈಫೇ ಸೂಪರ್’ ಎಂದು ನನ್ನ ಅನೇಕ ಸ್ನೇಹಿತರು ನನ್ನ ಕಂಡಾಗಲೆಲ್ಲ ಹೇಳುತ್ತಿರುತ್ತಾರೆ. ಆದರೆ, ಮಿನಿಸ್ಟರ್‌ಗಳಿಗೆ ಇರಲಿ, ನಮ್ಮ ಏರಿಯಾ ಕಾರ್ಪೊರೇಟರ್‌ಗೂ ನನ್ನ ಹೆಸರು ಗೊತ್ತಿಲ್ಲ. ಕಾರ್ಪೊರೇಟರ್ ದೂರ ಆಯ್ತು, ನಮ್ಮ ಮನೆಯಿಂದ ಮೂರನೇ ಮನೆಯಲ್ಲಿರೋರಿಗೂ ನಾನು ಯಾರೆಂದು ತಿಳಿದಿಲ್ಲ.

***

‘ನೋಡಿ ಸರ್, ಇದು ಎಲ್ಲೋ ಝೋನ್. ಇಲ್ಲಿ ನೀವು ಸೈಟ್ ತಗೊಂಡ್ರೆ ಆರಾಮಾಗಿ ಮನೆ ಕಟ್ಟಬಹುದು. ಇನ್ನು, ಗ್ರೀನ್ ಝೋನ್ ಮತ್ತು ರೆಡ್ ಝೋನ್ ಬಗ್ಗೆ ನಿಮಗೆ ಗೊತ್ತೇ ಇದೆಯಲ್ಲ’ ಎಂದ ಆ ಬ್ರೋಕರ್. ‘ಹೂಂ, ಹೂಂ ಗೊತ್ತು’ ಎಂದು ನಂತರ ಬಂದು ಓದಿಕೊಂಡಿದ್ದೆ!

‘ನನ್ನ ಸಂದರ್ಶನ ಮಾಡೋದಕ್ಕೆ ಅದ್ಯಾವುದೋ ಪೇಪರ್‌ನಿಂದ ಹುಡುಗನೊಬ್ಬ ಬಂದಿದ್ದ. ನಿನಗೆ ನನ್ನ ಇಂಟರ್‌ವ್ಯೂ ಮಾಡೋದಕ್ಕೆ ಏನು ಅರ್ಹತೆ ಇದೆ? ಯಕ್ಷಗಾನ ಪರಂಪರೆ, ತುಳುವಿನ ಇತಿಹಾಸ ಎಲ್ಲ ಓದ್ಕೊಂಡ್ ಬಾ, ನಂತರ ಇಂಟರ್‌ವ್ಯೂ ಕೊಡುತ್ತೇನೆ ಎಂದು ಝಾಡಿಸಿ ಕಳಿಸಿದ್ದೆ’ ಎಂದರು ಹಿರಿಯರೊಬ್ಬರು ಗತ್ತಿನಲ್ಲಿ. ‘ದಾವಣಗೆರೆಯವನಾದ ನನಗೆ ಯಕ್ಷಗಾನದ ಬಗ್ಗೆಯಾಗಲಿ, ತುಳುವಿನ ಬಗ್ಗೆಯಾಗಲಿ ಏನೂ ಗೊತ್ತಿಲ್ವಲ್ಲ, ಹಾಗಿದ್ದರೆ ನನಗೂ ಇವರನ್ನ ಸಂದರ್ಶನ ಮಾಡೋದಕ್ಕೆ ಅರ್ಹತೆ ಇಲ್ವಾ’ ಎಂದು ಮನಸಲ್ಲಿಯೇ ನನ್ನನ್ನ ಕೇಳಿಕೊಂಡೆ. ಜೊತೆಜೊತೆಗೆ, ‘ಹಾಗಿದ್ದರೆ, ನಮ್ಮ ದಾವಣಗೆರೆಯ ಬಗ್ಗೆ ಇವರಿಗೆ ಎಲ್ಲ ಮಾಹಿತಿ ಗೊತ್ತಿದ್ದುಬಿಡುತ್ತಾ’ ಎಂದೂ ನನಗೆ ನಾನೇ ಪ್ರಶ್ನಿಸಿಕೊಂಡೆ!

***

ಕ್ಯಾಬ್ ಡ್ರೈವರ್ ಒಬ್ಬರು ಜಾತಿಗಣತಿ ಒಳಮೀಸಲಾತಿಯಿಂದ ಹಿಡಿದು, ಗ್ರೇಟರ್ ಬೆಂಗಳೂರು–ಸ್ಕೈ ಡೆಕ್‌ವರೆಗೆ, ಎತ್ತಿನಹೊಳೆ ಯೋಜನೆಯಿಂದ ಹಿಡಿದು, ಕೆಆರ್‌ಎಸ್ ಡ್ಯಾಂ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣದವರೆಗೆ ಎಲ್ಲದರ ಬಗ್ಗೆ ಅಂಕಿ–ಅಂಶ ಸಹಿತ ಕರಾರುವಾಕ್ಕಾಗಿ ಮಾತಾಡುತ್ತ ಕೊನೆಯಲ್ಲಿ ಕೇಳಿದರು, ‘ನೀವೇನ್ ಮಾಡೋದು ಸರ್?’. ‘ನಾನು ಪತ್ರಕರ್ತ’. ‘ಓಹ್, ಹೌದಾ! ನಿಮಗೇನ್ ಬಿಡಿ ಸರ್ ಎಲ್ಲ ಗೊತ್ತಿರುತ್ತಲ್ಲ’ ಎಂದರು. ಮತ್ತೆ ನನ್ನದು ಅದೇ ಹಳಸಲು ನಗು! ■

